ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1330
ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 23.09.2021.
ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರಸ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಕೆಲವು ಗ್ರಾಮಗಳಲ್ಲಿ ಸಮಾಜಘಾತುಕ ಶಕ್ತಿಗಳು ಅಕ್ರಮವಾಗಿ ಇಸ್ಪೀಟ್ ಅಡ್ಡೆಗಳನ್ನು ಗ್ರಾಮದ ಚಿಲ್ಲರೆ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಗ್ರಾಮದ ಹೆಸರು, ವ್ಯಕ್ತಿಗಳ ಹೆಸರುವಾರು ವಿವರ ತಿಳಿಸುವುದು;</td><td rowspan="2">ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಕೆಲವು ಗ್ರಾಮಗಳಲ್ಲಿ ಸಮಾಜಘಾತುಕ ಶಕ್ತಿಗಳು ಅಕ್ರಮವಾಗಿ ಇಸ್ಪೀಟ್ ಅಡ್ಡೆಗಳನ್ನು ಗ್ರಾಮದ ಚಿಲ್ಲರೆ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಿದ್ದು, ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ವರ್ಷವಾರು ವಿವರ ಕೆಳಗಿನಂತಿದೆ.
<table>
<tr><th>ಕ್ರಸ</th><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2019</td><td>17</td></tr>
<tr><td>2</td><td>2020</td><td>12</td></tr>
<tr><td>3</td><td>2021</td><td>03</td></tr>
<tr><td></td><td>ಒಟ್ಟು</td><td>32</td></tr>
</table>
ಇಸ್ಪೀಟ್ ಆಡುತ್ತಿದ್ದವರ ವಿರುದ್ಧ ಪ್ರಕರಣ ದಾಖಲಿಸಿದ್ದು, ವರ್ಷವಾರು ಪ್ರಕರಣಗಳ ವಿವರ ಕೆಳಗಿನಂತಿದೆ.
<table>
<tr><th>ಕ್ರಸ</th><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2019</td><td>03</td></tr>
<tr><td>2</td><td>2020</td><td>02</td></tr>
<tr><td>3</td><td>2021</td><td>08</td></tr>
<tr><td></td><td>ಒಟ್ಟು</td><td>13</td></tr>
</table>
ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಶನ್ ಸಂಖ್ಯೆ: 7026/2021(ಪಿ.ಐ.ಎಲ್) ನಿರ್ದೇಶನದನ್ವಯ ತನಿಖಾ ಹಂತದಲ್ಲಿರುವ ಪ್ರಕರಣಗಳ ಕುರಿತು ದೂರುದಾರರು ಹಾಗೂ ಆರೋಪಿತರ ವೈಯಕ್ತಿಕ ಮಾಹಿತಿಯನ್ನು ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಹಂಚಿಕೊಳ್ಳದಂತೆ ಸರ್ಕಾರದ ಸಂಖ್ಯೆ:ಹೆಚ್‌ಡಿ 59 ಎಸ್‌ಎಸ್‌ಟಿ 2021, ದಿನಾಂಕ:11.08.2021ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದೆ.</td></tr>
<tr><td>ಆ</td><td>ಇಂತಹ ಅಕ್ರಮಕ್ಕೆ ಕಾರಣರಾಗಿ ಮುಗ್ಧ ರೈತರ ಬದುಕನ್ನು ನಾಶ ಮಾಡುತ್ತಿರುವವರ ವಿರುದ್ಧ ದೂರು ದಾಖಲಾಗಿದೆಯೇ; ಇದ್ದಲ್ಲಿ, ದೂರು ನೀಡಿದವರು ಯಾರು; (ದೂರಿನ ಪ್ರತಿ ಒದಗಿಸುವುದು)</td></tr>
</table>

ಇ	ರೈತರ ಬಾಳನ್ನು ಹಾಳು ಮಾಡುತ್ತಿರುವ ಇಸ್ಪೀಟ್ ಅಡ್ಡೆಗಳು, ಮಧ್ಯ ಮಾರಾಟದ ಬಗ್ಗೆ ಪೊಲೀಸ್ ಇಲಾಖೆಗೆ ಸ್ಪಷ್ಟವಾಗಿ ತಿಳಿದಿದ್ದರೂ ಕೈಕಟ್ಟಿ ಕುಳಿತಿರುವುದು ನಿಜವೇ;	ರೈತರ ಬಾಳನ್ನು ಹಾಳು ಮಾಡುತ್ತಿರುವ ಇಸ್ಪೀಟ್ ಅಡ್ಡೆಗಳು, ಮಧ್ಯ ಮಾರಾಟದ ಬಗ್ಗೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.
ಈ	ಇಂತಹ ಅಕ್ರಮಗಳನ್ನು ತಡೆಗಟ್ಟಲು ಇಲಾಖೆ ಕೈಗೊಂಡಿರುವ ಕಠಿಣ ಕ್ರಮಗಳೇನು; ವಿವರ ನೀಡುವುದು;	ಸಿಬ್ಬಂದಿಗಳಿಗೆ ಗ್ರಾಮಗಳನ್ನು ವಿಂಗಡಣೆಯನ್ನು ಮಾಡಿ ಗಸ್ತಿಗೆ ಪ್ರತ್ಯೇಕವಾಗಿ ನಿಯೋಜನೆ ಮಾಡಿರುತ್ತದೆ. ಬೀಟ್ ಸಿಬ್ಬಂದಿಗಳನ್ನು ತಿಂಗಳಲ್ಲಿ 2-3 ಬಾರಿ ಗ್ರಾಮಗಳಿಗೆ ಗಸ್ತಿಗೆ ನೇಮಕ ಮಾಡುತ್ತಿದ್ದು, ಅಕ್ರಮ ಕಂಡುಬಂದಲ್ಲಿ ಗ್ರಾಮಸ್ಥರಿಂದ ಮಾಹಿತಿ ಪಡೆದು ಪ್ರಕರಣವನ್ನು ದಾಖಲು ಮಾಡಲಾಗುತ್ತಿದೆ.
ಉ	ಇಂತಹ ಅಕ್ರಮಗಳ ಬಗ್ಗೆ ಗ್ರಾಮಸ್ಥರು ಮಾಹಿತಿ ನೀಡಲು ಸಹಾಯವಾಣಿ ಸ್ಥಾಪಿಸಲಾಗಿದೆಯೇ; ಇದ್ದಲ್ಲಿ ಸಹಾಯವಾಣಿ ಸಂಖ್ಯೆ ನೀಡುವುದು; ಇಲ್ಲದಿದ್ದಲ್ಲಿ, ಮಾಹಿತಿ ನೀಡುವ ಸಲುವಾಗಿ ಸಹಾಯವಾಣಿ ಸ್ಥಾಪಿಸಿ ರೈತರ ಬದುಕನ್ನು ಹಸನಾಗಿಸುವ ದಿಕ್ಕಿನಲ್ಲಿ ಪ್ರಯತ್ನ ಕೈಗೊಳ್ಳಲಾಗುವುದೇ?	ಅಕ್ರಮಗಳ ಬಗ್ಗೆ ಗ್ರಾಮಸ್ಥರು 080-27734231 ಅಥವಾ 112ಗೆ ಕರೆ ಮಾಡಿ ಮಾಹಿತಿ ನೀಡಲು ಸಹಾಯಕವಾಗುವಂತೆ ಗ್ರಾಮಸ್ಥರಿಗೆ ಠಾಣೆಯ ಸ್ಥಿರ ದೂರವಾಣಿ ಸಂಖ್ಯೆ, ಪಿ.ಎಸ್.ಐ, ವೃತ್ತ ನಿರೀಕ್ಷಕರು, ಡಿವೈಎಸ್‌ಪಿ ಹಾಗೂ ಜಿಲ್ಲಾ ನಿಸ್ತಂತು ಕೊಠಡಿ ಫೋನ್ ನಂಬರ್ ಒಳಗೊಂಡ ಬ್ಯಾನರ್‌ಗಳನ್ನು ಪ್ರತಿ ಹಳ್ಳಿಗಳಲ್ಲಿ ಸಾರ್ವಜನಿಕರು ಸೇರುವ ಪ್ರಮುಖ ಸ್ಥಳಗಳಲ್ಲಿ ಅಂಟಿಸಲಾಗಿರುತ್ತದೆ.

ಹೆಚ್‌ಡಿ 368 ಎಸ್‌ಎಸ್‌ಟಿ 2021

(ಆರಗ ಜ್ಞಾನೇಂದ್ರ) 22/9/2021
ಗೃಹ ಸಚಿವರು